**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 484/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಂಗಾಧರ | ಪ್ರಾ.ಸಾಃ 2 |
| ತಂದೆಯ/ಗಂಡನ ಹೆಸರು | : | ಮರುಳಪ್ಪ | ಚಾ.ಸಾಃ 2 |
| ವಯಸ್ಸು | : | 45 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆರ್.ಗೊಲ್ಲರಹಳ್ಳಿ ಗ್ರಾಮ | ದಿಃ19.02.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ.1 ಮತ್ತು 3 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

2. ಸಾಕ್ಷಿ ನಿಪಿ.2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ 2023 ನೇ ಸಾಲಿನಲ್ಲಿ ನಮ್ಮ ಗ್ರಾಮದ ದಾರಿಯಲ್ಲಿ ಮಾಡಿರುತ್ತೇನೆ. ದಾರಿಯ ವಿಚಾರವಾಗಿ ಗಲಾಟೆ ಮಾಡಿಕೊಂಡಿದ್ದ ಬಗ್ಗೆ ಸಹಿ ಮಾಡಿರುತ್ತೇನೆ. ಪೊಲೀಸರು ಸ್ಥಳದಲ್ಲಿ ಮಹಜರನ್ನು ಜರುಗಿಸಿದ್ದರು. ಮಹಜರಿನ ಸಮಯದಲ್ಲಿ ಪೊಲೀಸರು ಕಲ್ಲು ಮತ್ತು ಕೋಲನ್ನು ಅಮಾನತ್ತುಪಡಿಸಿಕೊಂಡರು. ಮಹಜರನ್ನು ಮದ್ಯಾಹ್ನ 12.30 ರಿಂದ 1 ಗಂಟೆಯವರೆಗೆ ಜರುಗಿಸಿದ್ದರು. ಆ ಸಮಯದಲ್ಲಿ ನನ್ನೊಂದಿಗೆ ನಮ್ಮ ಗ್ರಾಮದವರು ಇನ್ನೂ ಕೆಲವರು ಇದ್ದರು. ನಿಪಿ.2 ಕ್ಕೆ ಅವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿ ನಿಪಿ.3 ಮತ್ತು 4 ರ ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾಚಿತ್ರಗಳನ್ನು ಮಹಜರಿನ ಸಮಯದಲ್ಲಿ ತೆಗೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮ.ಮಾ.1 ಮತ್ತು 2 ರ ಕಲ್ಲು ಮತ್ತು ಕೋಲನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ಮಹಜರನ್ನು ದಿನಾಂಕ 08.08.2023 ರಂದು ಮದ್ಯಾಹ್ನ 12 ರಿಂದ 1 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಮಹಜರಿನ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ನನ್ನೊಂದಿಗೆ ಚಾಸಾ.1 ಮತ್ತು 3 ರವರು ಸಹ ಇದ್ದರು ಎಂದರೆ ಸರಿ. ಚಾಸಾ.1 ರವರು ಸ್ಥಳ ತೋರಿಸಿದ ಮೇರೆಗೆ ಮಹಜರಿನ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಮಹಜರಿಗೆ ನನ್ನೊಂದಿಗೆ ಚಾಸಾ.1 ಮತ್ತು 3 ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದ**

4. ನಾನು ವ್ಯವಸಾಯ ಮಾಡುತ್ತೇನೆ. ನಮ್ಮ ಕುಟುಂಬಕ್ಕೆ ಸ.ನಂ.13 ರಲ್ಲಿ ಜಮೀನು ಇದೆ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಕ್ಯಾಂಪಿನಿಂದ ಗುಂಡೇರಿ ಕಡೆಗೆ ರಸ್ತೆಯನ್ನು ತೋರಿಸಿರುತ್ತಾರೆ ಎಂದರೆ ಸರಿ. ಕ್ಯಾಂಪಿನಿಂದ ಗುಂಡೇರಿ ರಸ್ತೆಯವರೆಗೆ 44 ಜನರ ಜಮೀನುಗಳು ಬರುತ್ತವೆ ಎಂದರೆ ಸರಿ. ಸದರಿ ರಸ್ತೆಯ ಮೂಲಕವೇ ನಮ್ಮ ಜಮೀನಿಗೆ ಹೋಗಬೇಕು ಎಂದರೆ ಸರಿ. ಮಹಜರಿನ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಕಾವಲು ತಿಮ್ಮಪ್ಪನ ಜಮೀನು, ಪಶ್ಚಿಮಕ್ಕೆ ಚನ್ನಬಸಪ್ಪರವರ ಜಮೀನು, ಉತ್ತರಕ್ಕೆ ದಾರಿ, ದಕ್ಷಿಣಕ್ಕೆ ದಾರಿ ಇದೆ. ಮಹಜರಿನ ಕುರಿತು ಪೊಲೀಸರು ನನಗೆ ನೋಟೀಸನ್ನು ನೀಡಿಲ್ಲ. ಪೊಲೀಸರು ನನ್ನ ಸಮಕ್ಷಮ ದಾರಿಯ ಕುರಿತು ಅಳತೆ ಮಾಡಿಲ್ಲ. ಸದರಿ ದಾರಿಯಲ್ಲಿ ಕಲ್ಲು ಮತ್ತು ದೊಣ್ಣೆಗಳು ಸಿಗುತ್ತವೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರ ಕಲ್ಲು ಮತ್ತು ದೊಣ್ಣೆಯನ್ನು ಚಾಸಾ.1 ರವರು ತಂದು ಕೊಟ್ಟಿರುತ್ತಾರೆ. ಗಲಾಟೆ ಆದ ಸ್ಥಳದಿಂದ ತಂದು ಕೊಟ್ಟರು. ನನ್ನ ಸಮಕ್ಷಮದಲ್ಲಿ ಪೊಲೀಸರು ಮಹಜರನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಮದ್ಯಾಹ್ನ 12 ರಿಂದ 1 ಗಂಟೆಯವರೆಗೆ ಬರೆದಿರುತ್ತಾರೆ. ಮಹಜರನ್ನು ಮಾಡಲು ಮೂರು ಜನ ಪೊಲೀಸರು ಬಂದಿದ್ದರು. ಮೂರು ಜನರು ಛಾಯಾಚಿತ್ರವನ್ನು ತೆಗೆಸಿಕೊಂಡಿರುತ್ತಾರೆ. ಮಹಜರನ್ನು ನನಗೆ ಓದಿ ಹೇಳಿಲ್ಲ. ಪೊಲೀಸರು ಸಹಿ ಮಾಡಿ ಎಂದು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ಆರೋಪಿತರಿಗೆ ತೊಂದರೆಯನ್ನು ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.